# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 555
2. ಸದಸ್ಯರ ಹೆಸರು. : ಶ್ರೀ ಚಿದಾನಂದ್ ಎಂ.ಗೌಡ.(ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ :19.07.2024
4. ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಅ)</td><td>ಸಹಾಯಕ ನಿರ್ದೇಶಕರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇವರು ನಿರ್ವಹಿಸುವ ಕೆಲಸಗಳೇನು;</td><td>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಪಂಚಾಯತ್ ಕಛೇರಿಗೆ ಸಹಾಯಕ ನಿರ್ದೇಶಕ (ಆಡಳಿತ) ಎಂದು ತಾಲ್ಲೂಕು ಪಂಚಾಯತ್ ಕಛೇರಿಗಳಲ್ಲಿ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಮತ್ತು ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್) ಎಂಬ ಹುದ್ದೆಗಳು ಮಂಜೂರಾಗಿರುತ್ತವೆ.<br><br>ಸದರಿ ಹುದ್ದೆಗಳಿಗೆ ನಿಗದಿಪಡಿಸಿರುವ ಕೆಲಸಗಳು/ ಕಾರ್ಯಹಂಚಿಕೆಗಳನ್ನು ಒಳಗೊಂಡ ಆದೇಶದ ಪ್ರತಿಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.</td></tr>
<tr><td>(ಆ)</td><td>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಮಂಜೂರಾಗಿರುವ ಸಹಾಯಕ ನಿರ್ದೇಶಕರ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿಯಿರುವ ಸಹಾಯಕ ನಿರ್ದೇಶಕರ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು</td><td>ಮಂಜೂರಾಗಿರುವ ಹುದ್ದೆಗಳ ಸಂಖ್ಯೆ<br><table><tr><th>ಕ್ರ.ಸಂ.</th><th>ಹುದ್ದೆ</th><th>ಮಂಜೂರು</th></tr><tr><td>1</td><td>ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ)</td><td>233</td></tr><tr><td>2</td><td>ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್)</td><td>226</td></tr><tr><td>3</td><td>ಸಹಾಯಕ ನಿರ್ದೇಶಕ (ಆಡಳಿತ)</td><td>31</td></tr></table>ಖಾಲಿ ಇರುವ ಸಹಾಯಕ ನಿರ್ದೇಶಕರು</td></tr>
</table>

| | | |
|---|---|---|
| | ತಾಲ್ಲೂಕುವಾರು ವಿವರ ನೀಡುವುದು). | (ಗ್ರಾಮೀಣ ಉದ್ಯೋಗ) ಸಹಾಯಕ ನಿರ್ದೇಶಕರು (ಪಂಚಾಯತ್ ರಾಜ್), ಸಹಾಯಕ ನಿರ್ದೇಶಕರು (ಆಡಳಿತ) ಹುದ್ದೆಗಳ ಪಟ್ಟಿಯನ್ನು ಕ್ರಮವಾಗಿ ಅನುಬಂಧ-2 ರಿಂದ 4 ರವರಗೆ ಇದರೊಂದಿಗೆ ಲಗತ್ತಿಸಿದೆ. |
| (ಇ) | ಹಲವು ಹುದ್ದೆಗಳು ಖಾಲಿಯಿರುವ ಕಾರಣ ಇಲಾಖೆಯ ಯೋಜನೆ/ಕಾರ್ಯಕ್ರಮ ಅನುಷ್ಠಾನ ಮೇಲ್ವಿಚಾರಣೆಗೆ ತೊಂದರೆಯಾಗುವುದಿಲ್ಲ. | ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ಸಹಾಯಕ ನಿರ್ದೇಶಕರು (ಪಂಚಾಯತ್ ರಾಜ್) ವೃಂದದಲ್ಲಿ ಹಲವು ಹುದ್ದೆಗಳು ಖಾಲಿ ಇರುವುದರಿಂದ ಕಛೇರಿಯ ಕೆಲಸ ಕಾರ್ಯಗಳಿಗೆ ಉಂಟಾಗುವ ಅಡಚಣೆ ನಿವಾರಿಸಲು ಖಾಲಿ ಇರುವ ಹುದ್ದೆಗಳ ಎದುರು ಅರ್ಹ ಅಧಿಕಾರಿ/ನೌಕರರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸುವ ಮೂಲಕ ಕಾರ್ಯನಿರ್ವಹಣೆ ಮಾಡಲಾಗುತ್ತಿದೆ. |
| (ಈ) | ಖಾಲಿಯಿರುವ ಸಹಾಯಕ ನಿರ್ದೇಶಕರ ಹುದ್ದೆಗೆ ಯಾವ ಕಾಲಮಿತಿಯಲ್ಲಿ ಬಡ್ತಿ ನೀಡಲಾಗುವುದು. | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯ ಕುರಿತು ನ್ಯಾಯಾಲಯಗಳಲ್ಲಿ ಬಾಕಿ ಇದ್ದ ರಿಟ್ ಅರ್ಜಿಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಅನುಸಾರ ರಚಿಸಲ್ಪಟ್ಟ ಸಮಿತಿಯು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಿದ್ದು, ಅದನ್ನು ಅನುಸರಿಸಿ, ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:15.6.2024 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಭಾದಿತರಿಂದ ಆಕ್ಷೇಪಣೆಗಳನ್ನು ಪಡೆಯಲಾಗಿರುತ್ತದೆ. ಬಾಧಿತರಿಂದ ಸ್ವೀಕೃತವಾಗಿರುವ ಆಕ್ಷೇಪಣೆ ಹಾಗೂ ಸಲಹೆಗಳನ್ನು ಪರಿಶೀಲಿಸಿಕೊಂಡು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಪ್ರಕ್ರಿಯೆ ಪ್ರಗತಿಯಲಿದ್ದು ಸದರಿ ಜೇಷ್ಠತಾ ಪಟ್ಟಿಯು ಅಂತಿಮಗೊಂಡ ನಂತರ ಅರ್ಹ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ |

| | | |
|---|---|---|
| | | ಮುಂಬಡ್ತಿ ನೀಡುವ ಮೂಲಕ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) (ಪಂಚಾಯತ್ ರಾಜ್) ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು. |

ಗ್ರಾಅಪ 165 ಕೆ.ಎಸ್.ಎಸ್2024(ಇ)

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಅನುಬಂಧ -1

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ತಾಲ್ಲೂಕು ಪಂಚಾಯತ್‌ಗಳಲ್ಲಿ ಮಂಜೂರಾಗಿರುವ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಮತ್ತು ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್) ಹುದ್ದೆಗಳಿಗೆ ಕಾರ್ಯಹಂಚಿಕೆ – ಆದೇಶ.

ಓದಲಾಗಿದೆ

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 104 ಉಖಾಯೋ 2007, 02.4.2008.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 17 ಪಬವ 2005 (ಭಾ), ದಿನಾಂಕ:24.3.2011.
3. ಅಧಿಸೂಚನೆ ಸಂಖ್ಯೆ:ಗ್ರಾಅಪ 17 ಪಬವ 2005, ದಿನಾಂಕ:11.7.2011.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 17 ಪಬವ 2005, ದಿನಾಂಕ:21.4.2012.
5. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 133 ಕೆ.ಎಸ್.ಎಸ್. 2017, ದಿನಾಂಕ:12.6.2019 ಮತ್ತು 26.8.2019.
6. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 05 ಕೆ.ಎಸ್.ಎಸ್. 2016, ದಿನಾಂಕ:31.5.2021.
7. ಕಡತ ಸಂಖ್ಯೆ:ಆರ್.ಡಿ.ಸಿ –ಇಜಿಎಸ್–60/2021.

## ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:02.4.2008ರ ಆದೇಶದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ವಿವಿಧ ವೃಂದದ ಹುದ್ದೆಗಳನ್ನು ತಾಲ್ಲೂಕು ಮಟ್ಟದಲ್ಲಿ ಸೃಜಿಸಲಾಗಿದ್ದು, ಸದರಿ ಆದೇಶದಲ್ಲಿ ಪ್ರತಿ ತಾಲ್ಲೂಕಿಗೆ ಒಂದರಂತೆ ಅಂದು ಅಸ್ತಿತ್ವದಲ್ಲಿದ್ದ 176 ತಾಲ್ಲೂಕುಗಳಿಗೆ ತಲಾ ಒಂದು ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿ ಹುದ್ದೆಯನ್ನು ಸೃಜಿಸಲಾಗಿತ್ತು. ಈ ರೀತಿ ಸೃಜಿಸಿದ ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿ ಹುದ್ದೆಯನ್ನು ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ:24.3.2011 ರ ಆದೇಶದಲ್ಲಿ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಎಂದು ಪುನರ್ ಪದನಾಮೀಕರಿಸಿದ್ದು, ಸದರಿ ಹುದ್ದೆಗಳನ್ನು ಮೇಲೆ ಓದಲಾದ ಕ್ರಮಾಂಕ (3)ರ ದಿನಾಂಕ:11.7.2011ರ ಅಧಿಸೂಚನೆಯಲ್ಲಿ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) ವೃಂದ ಮತ್ತು ನೇಮಕಾತಿ ನಿಯಮಗಳ, 2008 ಕ್ಕೆ ತಿದ್ದುಪಡಿ ತರುವ ಮೂಲಕ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರ್ಪಡೆ ಮಾಡಲಾಗಿದೆ.

ಈ ರೀತಿ, ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) ವೃಂದ ಮತ್ತು ನೇಮಕಾತಿ ನಿಯಮಗಳು 2008 ರಡಿ ಸೇರ್ಪಡೆಗೊಳಿಸಿದ ಹುದ್ದೆಗಳಿಗೆ ಕಾರ್ಯಹಂಚಿಕೆಯನ್ನು ನಿಗದಿಪಡಿಸಿ ಮೇಲೆ ಓದಲಾದ ಕ್ರಮಾಂಕ (4)ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. ನಂತರ ಕಂದಾಯ ಇಲಾಖೆಯ ಆದೇಶಗಳನ್ವಯ ಹೊಸದಾಗಿ 51 ತಾಲ್ಲೂಕುಗಳು ರಚನೆಯಾಗಿದ್ದನ್ನು ಅನುಸರಿಸಿ, ಮೇಲೆ ಓದಲಾದ ಕ್ರಮಾಂಕ (5)ರ ಆದೇಶಗಳಲ್ಲಿ 50 ತಾಲ್ಲೂಕುಗಳ (ಆದೇಶ ಸಂಖ್ಯೆ:ಗ್ರಾಅಪ 05 ಕೆ.ಎಸ್.ಎಸ್ 2016(1) ದಿನಾಂಕ:13.7.2021 ರಲ್ಲಿ ಹುಬ್ಬಳ್ಳಿ ನಗರವನ್ನು ಕೈ ಬಿಡಲಾಗಿದೆ) ತಾಲ್ಲೂಕು ಪಂಚಾಯತ್ ಕಛೇರಿಗಳಿಗೆ ವಿವಿಧ ವೃಂದದ ಅಧಿಕಾರಿ ಸಿಬ್ಬಂದಿಗಳನ್ನು ಮಂಜೂರು ಮಾಡಿ, ಆದೇಶ ಹೊರಡಿಸಲಾಗಿದೆ. ಸದರಿ ಆದೇಶದಲ್ಲಿ ಪ್ರತಿ ತಾಲ್ಲೂಕಿಗೆ ಒಂದರಂತೆ ಒಟ್ಟು 50 ತಾಲ್ಲೂಕು ಪಂಚಾಯತ್‌ಗಳಿಗೆ 50 ಸಹಾಯಕ ನಿರ್ದೇಶಕ(ಗ್ರಾಮೀಣ ಉದ್ಯೋಗ) ಹುದ್ದೆಗಳು ಮಂಜೂರಾಗಿರುತ್ತವೆ. ಈ ರೀತಿಯಾಗಿ 226 ತಾಲ್ಲೂಕು ಪಂಚಾಯತ್‌ಗಳಿಗೆ ತಲಾ ಒಂದು ಸಹಾಯಕ ನಿರ್ದೇಶಕ (ಗ್ರಾ.ಉ) ಹುದ್ದೆಯಂತೆ ಒಟ್ಟು 226 ಸಹಾಯಕ ನಿರ್ದೇಶಕ (ಗ್ರಾ.ಉ) ಹುದ್ದೆಗಳು ಮಂಜೂರಾಗಿರುತ್ತವೆ.

ಇತ್ತೀಚಿನ ದಿನಗಳಲ್ಲಿ ಗ್ರಾಮ ಪಂಚಾಯತಿಗಳು ಹೆಚ್ಚೆಚ್ಚು ಅನುದಾನವನ್ನು ಪಡೆಯುತ್ತಿದ್ದು, ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಗುರುತರ ಜವಾಬ್ದಾರಿಯನ್ನು ಹೊಂದಿದ್ದು, ಸದರಿ ಅಭಿವೃದ್ಧಿ ಯೋಜನೆಗಳ ಮೇಲ್ವಿಚಾರಣೆ, ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಯೋಜನೆಗಳ ತಯಾರಿಕೆ, ಅನುಷ್ಠಾನ, 14 ಮತ್ತು 15ನೇ ಹಣಕಾಸು ಆಯೋಗದ ಅನುದಾನದ ಬಳಕೆ, ಗ್ರಾಮ ಪಂಚಾಯತಿ ತೆರಿಗೆ ಸಂಗ್ರಹ, ಗ್ರಾಮ ಸಭೆಗಳ ನಿರ್ವಹಣೆ, ಗ್ರಾಮ ಪಂಚಾಯತಿಗಳ ಬಾಕಿ ವಿದ್ಯುತ್ ಬಿಲ್ಲುಗಳ ಪಾವತಿ, ಗ್ರಾಮ ಪಂಚಾಯತಿ ಮಟ್ಟದ ಆಸ್ತಿಗಳ ಅತಿಕ್ರಮಣ ತೆರವುಗೊಳಿಸುವುದು ಮತ್ತು ಸಂರಕ್ಷಣೆ ಮುಂತಾದ ಪಂಚಾಯತ್ ರಾಜ್ ಕಾರ್ಯಚಟುವಟಿಕೆಗಳ ಸೂಕ್ತ ಮೇಲ್ವಿಚಾರಣೆ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಯ ಕಾರ್ಯ ನಿರ್ವಹಣೆಯಲ್ಲಿ ಸೂಕ್ತ ನೆರವು ನೀಡುವ ನಿಟ್ಟಿನಲ್ಲಿ ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ ಇನ್ನೊಂದು ಸಹಾಯಕ ನಿರ್ದೇಶಕ ಹುದ್ದೆಯ ಅಗತ್ಯವಿರುವುದು ಕಂಡು ಬಂದ ಹಿನ್ನಲೆಯಲ್ಲಿ ಮೇಲೆ ಓದಲಾದ ಕ್ರಮಾಂಕ (6)ರ ದಿನಾಂಕ:31.5.2021 ರ ಆದೇಶದಲ್ಲಿ 226 ತಾಲ್ಲೂಕು ಪಂಚಾಯತ್‌ಗಳಲ್ಲಿ ಹಾಲಿ ಅಸ್ತಿತ್ವದಲ್ಲಿದ್ದ 226 ಸಹಾಯಕ ನಿರ್ದೇಶಕ(ಗ್ರಾಮೀಣ ಉದ್ಯೋಗ) ಹುದ್ದೆಗಳ ಜೊತೆಗೆ ಹೆಚ್ಚುವರಿಯಾಗಿ ಪ್ರತಿ ತಾಲ್ಲೂಕಿಗೆ ಒಂದರಂತೆ 226 ತಾಲ್ಲೂಕುಗಳಿಗೆ 226 ಸಹಾಯಕ ನಿರ್ದೇಶಕ(ಪಂಚಾಯತ್ ರಾಜ್) ಹುದ್ದೆಗಳನ್ನು ಸೃಜಿಸಿ ಆದೇಶಿಸಲಾಗಿದೆ.

ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ಮೇಲೆ ಓದಲಾದ ಕ್ರಮಾಂಕ (7)ರ ಕಡತದಲ್ಲಿ ನರೇಗಾ ಯೋಜನೆಯ ಸಮರ್ಪಕ ಅನುಷ್ಠಾನದ ಉದ್ದೇಶಕ್ಕೆ ಸಹಾಯಕ ನಿರ್ದೇಶಕ(ಗ್ರಾಮೀಣ ಉದ್ಯೋಗ) ಹುದ್ದೆಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸುವುದರೊಂದಿಗೆ ಪರಿಷ್ಕೃತ ಕಾರ್ಯಹಂಚಿಕೆಯನ್ನು ನಿಗದಿಪಡಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಅದರಂತೆ ಪ್ರತಿ

ತಾಲ್ಲೂಕಿಗೆ ಎರಡು ಸಹಾಯಕ ನಿರ್ದೇಶಕ ಹುದ್ದೆಗಳಿಗೆ ಸೂಕ್ತ ರೀತಿ ಕಾರ್ಯಹಂಚಿಕೆ ಮಾಡಬೇಕಾದ ಅಗತ್ಯ ಕಂಡು ಬಂದಿರುವುದರಿಂದ, ಸಹಾಯಕ ನಿರ್ದೇಶಕ(ಗ್ರಾಮೀಣ ಉದ್ಯೋಗ) ಹುದ್ದೆಗೆ ದಿನಾಂಕ:21.4.2012 ರಲ್ಲಿ ಮಾಡಲಾದ ಕಾರ್ಯಹಂಚಿಕೆಯನ್ನು ರದ್ದುಪಡಿಸಿ ಸಹಾಯಕ ನಿರ್ದೇಶಕ(ಗ್ರಾಮೀಣ ಉದ್ಯೋಗ) ಮತ್ತು ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್) ಹುದ್ದೆಗಳಿಗೆ ಸೂಕ್ತ ಕಾರ್ಯಹಂಚಿಕೆ ಮಾಡಲು ಸರ್ಕಾರವು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 05 ಕೆ.ಎಸ್.ಎಸ್ 2016(ಭಾ-1) ಬೆಂಗಳೂರು, ದಿನಾಂಕ:17.8.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಮೇಲೆ ಓದಲಾದ ಕ್ರಮಾಂಕ (4)ರಲ್ಲಿ ಸಹಾಯಕ ನಿರ್ದೇಶಕ(ಗ್ರಾಮೀಣ ಉದ್ಯೋಗ) ಹುದ್ದೆಗೆ ಮಾಡಲಾದ ಕಾರ್ಯಹಂಚಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಮುಂದುವರೆದು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಂಜೂರಾಗಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಹುದ್ದೆಗಳಿಗೆ **ಅಂಕಣ-1** ರಲ್ಲಿರುವಂತೆ ಹಾಗೂ ಮೇಲೆ ಓದಲಾದ ಕ್ರಮಾಂಕ (6)ರ ಆದೇಶದ ಮೂಲಕ ಸೃಜಿಸಲಾದ ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್) ಹುದ್ದೆಗಳಿಗೆ **ಅಂಕಣ** (2) ರಲ್ಲಿರುವಂತೆ ಕಾರ್ಯಹಂಚಿಕೆ ಮಾಡಿ, ಅಧಿಕಾರ/ಜವಾಬ್ದಾರಿಯನ್ನು ನಿಗದಿಪಡಿಸಿ ಆದೇಶಿಸಿದೆ.

| **ಅಂಕಣ-1**<br>**ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ)** | **ಅಂಕಣ-2**<br>**ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್)** |
|---|---|
| 1. ಮಹಾತ್ಮಗಾಂಧಿ ನರೇಗಾ ಯೋಜನೆಯ ಕ್ರಿಯಾ ಯೋಜನೆಗಳನ್ನು ಗ್ರಾಮ ಪಂಚಾಯತಿಗಳು ಸಕಾಲದಲ್ಲಿ ಸಿದ್ಧಪಡಿಸಿ, ತಾಲ್ಲೂಕು ಪಂಚಾಯತಿಗೆ ಸಲ್ಲಿಸುವುದನ್ನು ಖಾತ್ರಿ ಪಡಿಸುವುದು. ಯೋಜನೆಯಡಿ ನಿಗದಿಪಡಿಸಿದ ಮಾನದಂಡಗಳನ್ನು ಅಳವಡಿಸಿಕೊಂಡು ಕ್ರಿಯಾಯೋಜನೆ ಸಿದ್ಧಪಡಿಸಿರುವುದರ ಮೇಲ್ವಿಚಾರಣೆಯ ಸಂಪೂರ್ಣ ಜವಾಬ್ದಾರಿ ನಿರ್ವಹಿಸುವುದು.<br>2. ಗ್ರಾಮ ಪಂಚಾಯತಿ ಮತ್ತು ಅನುಷ್ಠಾನ ಇಲಾಖೆಗಳು ಯೋಜನೆಯಡಿ ಕೆಲಸ ನಿರ್ವಹಿಸಿದ ಕೂಲಿಕಾರರಿಗೆ ನಿಗದಿತ ಕಾಲಮಿತಿಯೊಳಗೆ ಕೂಲಿ ಪಾವತಿಸುವುದನ್ನು ಮೇಲ್ವಿಚಾರಣೆ ಮಾಡುವುದು ಮತ್ತು ವಿಳಂಬ ಕೂಲಿ ಪಾವತಿ ಸಂದರ್ಭದಲ್ಲಿ | 1. ಶಾಸನಬದ್ಧ ಗ್ರಾಮಸಭೆ ಮತ್ತು ಇತರೆ ಗ್ರಾಮ ಸಭೆಗಳು, ಗ್ರಾಮ ಪಂಚಾಯತಿ ಸಭೆಗಳು, ಕೆ.ಡಿ.ಪಿ. ಸಭೆ, ಉಪ-ಸಮಿತಿ ಸಭೆಗಳನ್ನು ಗ್ರಾಮ ಪಂಚಾಯತಿವಾರು ಕ್ರಮಬದ್ಧವಾಗಿ ನಡೆಸುವ ಕುರಿತು ಮೇಲ್ವಿಚಾರಣೆ ಮಾಡುವುದು.<br>2. ಗ್ರಾಮ ಪಂಚಾಯತಿ ಅಧ್ಯಕ್ಷ/ಉಪಾಧ್ಯಕ್ಷ/ ಸದಸ್ಯರುಗಳ ಖಾಲಿ ಸ್ಥಾನ ಮತ್ತು ಇನ್ನಿತರೆ ಚುನಾವಣಾ ವಿಷಯಗಳ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸುವುದರ ಮೇಲ್ವಿಚಾರಣೆ.<br>3. ಗ್ರಾಮ ಪಂಚಾಯತಿವಾರು ಕಟ್ಟಡ/ಭೂಮಿಗಳ ತೆರಿಗೆ ದರಗಳ ನಿರ್ಧರಣೆ, ಪರಿಷ್ಕರಣೆ ಹಾಗೂ ಕ್ರಮಬದ್ಧಗೊಳಿಸುವುದರ ಮೇಲ್ವಿಚಾರಣೆ ಮಾಡುವುದು.<br>4. ಗ್ರಾಮ ಪಂಚಾಯತಿವಾರು ತೆರಿಗೆ / ಶುಲ್ಕಗಳ ಸಂಗ್ರಹಣೆ (ಡಿ.ಸಿ.ಬಿ) ಮತ್ತು ಬಾಕಿ ವಸೂಲಾತಿಯ ಬಗ್ಗೆ ಮೇಲ್ವಿಚಾರಣೆ. |

Rajeshu

ವಿಳಂಬಕ್ಕೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳನ್ನು ಗುರುತಿಸಿ ಅವರ ವಿರುದ್ಧ ಕ್ರಮಕ್ಕೆ ವರದಿ ಸಲ್ಲಿಸುವುದು.

3. ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸುವ ರೂ.10.00 ಲಕ್ಷದೊಳಗಿನ ಅಂದಾಜು ವೆಚ್ಚದ ಕಾಮಗಾರಿಗಳಿಗೆ ತಾಂತ್ರಿಕ ಸಂಯೋಜಕರೊಂದಿಗೆ ಜಂಟಿಯಾಗಿ ಚೆಕ್ ಮೆಸರ್‌ಮೆಂಟ್ ಮಾಡುವುದು.

4. ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸುವ ರೂ.10.00 ಲಕ್ಷಗಳಿಂದ ರೂ.20.00 ಲಕ್ಷಗಳ ವರೆಗಿನ ಅಂದಾಜು ಮೊತ್ತದ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರವನ್ನು ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ರವರಿಗೆ ಪ್ರತ್ಯಾಯೋಜಿಸಿದೆ.

5. ಪ್ರಸ್ತುತ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಕೂಲಿ ಮತ್ತು ಸಾಮಗ್ರಿ ವೆಚ್ಚಗಳ ಪಾವತಿಯಲ್ಲಿ ಗ್ರಾಮ ಪಂಚಾಯತಿ ಹಂತದಲ್ಲಿ ವಿಳಂಬವಾದಲ್ಲಿ ಎಫ್.ಟಿ.ಓ.ಗಳು ತಾಲ್ಲೂಕು ಪಂಚಾಯತಿ ಹಂತಕ್ಕೆ **escalate** ಆಗುತ್ತಿದ್ದು, ಈ ಎಫ್.ಟಿ.ಓ.ಗಳಿಗೆ ತಾಲ್ಲೂಕು ಪಂಚಾಯತಿ ಹಂತದಲ್ಲಿ ಸಹಾಯಕ ಲೆಕ್ಕಾಧಿಕಾರಿಯು **1st Signatory** ಆಗಿರುತ್ತಾರೆ. ಇದನ್ನು ಮಾರ್ಪಡಿಸಿ ಯೋಜನೆಯಡಿ ಅನುಷ್ಠಾನಗೊಳಿಸುವ ಕಾಮಗಾರಿಗಳ ಕೂಲಿ ಮತ್ತು ಸಾಮಗ್ರಿ ವೆಚ್ಚ ಪಾವತಿಗೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯತಿ ಹಂತದಲ್ಲಿ **1st Signatory** ಜವಾಬ್ದಾರಿಯನ್ನು ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ರವರಿಗೆ ವಹಿಸಲಾಗಿದೆ.

6. ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಗುರುತಿಸಲಾದ ಆಕ್ಷೇಪಣೆ ಮತ್ತು ವಸೂಲಾತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಮತ್ತು ಅನುಷ್ಠಾನ ಇಲಾಖೆಗಳು ಅನುಪಾಲನಾ ವರದಿಗಳನ್ನು ಸಿದ್ಧಪಡಿಸಿ ತಾಲ್ಲೂಕು ಮಟ್ಟದ ಆಡ್–ಹಾಕ್ ಸಮಿತಿಯ ಸಭೆಯಲ್ಲಿ ಮಂಡಿಸುವುದರ ಸಂಪೂರ್ಣ ಮೇಲ್ವಿಚಾರಣೆಯ

5. ಗ್ರಾಮ ಪಂಚಾಯತಿ ಸ್ವತ್ತು/ಆಸ್ತಿಗಳನ್ನು ಗುರುತಿಸುವುದು ಹಾಗೂ ಅತಿಕ್ರಮಣ ತೆರವುಗೊಳಿಸುವುದು ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಹಕರಿಸುವುದು.
6. ಗ್ರಾಮ ಪಂಚಾಯತಿವಾರು ಜಮಾಬಂಧಿ ಅನುಷ್ಠಾನದ ಮೇಲ್ವಿಚಾರಣೆ.
7. ಗ್ರಾಮ ಪಂಚಾಯತಿವಾರು ಮಾದರಿ ವಿನಿಯಮಗಳು ಮತ್ತು ಉಪ–ವಿಧಿಗಳ ರಚನೆಯ ಮೇಲ್ವಿಚಾರಣೆ ಮಾಡುವುದು.
8. ಗ್ರಾಮ ಪಂಚಾಯತಿ ಆಡಳಿತಾತ್ಮಕ ಸೇವೆಗಳಾದ ಆರ್.ಟಿ.ಐ., ಸಕಾಲ, ಬಾಪೂಜಿ ಸೇವಾ ಕೇಂದ್ರಗಳ ಕಾರ್ಯಕ್ರಮಗಳ ಹಾಗೂ ಗ್ರಂಥಾಲಯ ಅನುಷ್ಠಾನದ ಮೇಲ್ವಿಚಾರಣೆ.
9. ಇಲಾಖೆಯ ಇ–ಉಪಕ್ರಮಗಳಾದ ಪಂಚತಂತ್ರ, ಇ–ಸ್ವತ್ತು ಇತರೆ ಆನ್ ಲೈನ್ ಸೇವೆಗಳ ಅನುಷ್ಠಾನದ ಮೇಲ್ವಿಚಾರಣೆ
10. ಕೇಂದ್ರ, ರಾಜ್ಯ ಮತ್ತು ವಿದೇಶಿ ಪ್ರಾಯೋಜಿತ ಎಲ್ಲಾ ಯೋಜನೆಗಳ ನಿಯಮಿತ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿಯವರೊಂದಿಗೆ ಯೋಜನಾ ಶಾಖೆಯ ಮೇಲುಸ್ತುವಾರಿ ಮಾಡುವುದು
11. ಬರ/ಪ್ರವಾಹ/ಸಾಂಕ್ರಾಮಿಕ ರೋಗಗಳು/ಇನ್ನಿತರೆ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿವಾರು ಪ್ರತಿಬಂಧಕ ಮತ್ತು ಪರಿಹಾರಾತ್ಮಕ ಕ್ರಮಗಳ ಜಾರಿಗೆ ಮೇಲ್ವಿಚಾರಣೆ ಮಾಡುವುದು (ವಿಶೇಷವಾಗಿ ಕೋವಿಡ್–19, ಕಾಲರಾ)
12. ತಾಲ್ಲೂಕು ಪಂಚಾಯತಿ / ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಆಡಳಿತಾತ್ಮಕ ಪತ್ರಗಳು / ಸಾರ್ವಜನಿಕ ದೂರು / ಕುಂದು ಕೊರತೆ ಅರ್ಜಿಗಳ ಕ್ರಮಬದ್ಧ ವಿಲೇ ಮಾಡಲು ಮೇಲ್ವಿಚಾರಣೆ ಮಾಡುವುದು.
13. ಗ್ರಾಮ ಪಂಚಾಯತಿ ಜನಪ್ರತಿನಿಧಿಗಳು / ನೌಕರರು / ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಮೇಲ್ವಿಚಾರಣೆ
14. ಗ್ರಾಮ ಪಂಚಾಯತಿ ಮೂಲ ಸೌಕರ್ಯಗಳಿಗೆ ಸಂಬಂಧಿಸಿದ ವಿಷಯಗಳ ಮೇಲ್ವಿಚಾರಣೆ.
15. ನ್ಯಾಯಾಲಯಗಳು, ಲೋಕಾಯುಕ್ತ, ಎ.ಸಿ.ಬಿ., ಇತರೆ ಮೇಲ್ಮನವಿ ಪ್ರಾಧಿಕಾರಗಳು, ಸರ್ಕಾರ/ಜಿಲ್ಲಾಧಿಕಾರಿ ಕಛೇರಿ/ಜಿಲ್ಲಾ ಪಂಚಾಯತಿ ವಿಚಾರಣೆ/ಸಭೆಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಯವರ (ಅನುಪಸ್ಥಿತಿಯಲ್ಲಿ) ಪರವಾಗಿ/ಪ್ರತಿನಿಧಿಯಾಗಿ

ಜವಾಬ್ದಾರಿಯನ್ನು ನಿರ್ವಹಿಸುವುದು.

7. ಗ್ರಾಮ ಪಂಚಾಯತಿಗಳು ಯೋಜನೆಯಡಿ ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ಸಂಬಂಧಿಸಿದ ಕಡತಗಳನ್ನು ಮತ್ತು 1–7 ರಿಜಿಸ್ಟರ್‌ಗಳನ್ನು ನಿಗದಿತ ನಮೂನೆಗಳಲ್ಲಿ ನಿರ್ವಹಿಸುವುದನ್ನು ಪರಿಶೀಲಿಸುವುದು.

8. ತಾಲ್ಲೂಕು ಮಟ್ಟದಲ್ಲಿ ಯೋಜನೆಯಡಿ ಐ.ಇ.ಸಿ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಪೂರ್ಣ ಜವಾಬ್ದಾರಿ ನಿರ್ವಹಿಸುವುದು.

9. ಗ್ರಾಮ ಪಂಚಾಯತಿಗಳು "ರೋಜ್‌ಗಾರ್ ದಿನ"ವನ್ನು ಕಡ್ಡಾಯವಾಗಿ ಆಚರಿಸುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

10. ತಾಲ್ಲೂಕು ಪಂಚಾಯತಿಯಡಿಯಲ್ಲಿ ಕಾರ್ಯನಿರ್ವಹಿಸುವ ತಾಂತ್ರಿಕ ಸಂಯೋಜಕರು/ತಾಂತ್ರಿಕ ಸಹಾಯಕರ ಮಾಸಿಕ ದಿನಚರಿ ಮತ್ತು ಹಾಜರಾತಿಗಳನ್ನು ದೃಢೀಕರಿಸುವುದು ಮತ್ತು ಮಾಸಿಕ ಸಂಭಾವನೆ ಪಾವತಿಸುವುದು.

11. ಬಿ.ಎಫ್.ಟಿ.ಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ.

12. ಯೋಜನೆಯ ಮಾರ್ಗಸೂಚಿಗಳಲ್ಲಿ ಕಾಲಕಾಲಕ್ಕೆ ಆಗುವ ಮಾರ್ಪಾಡುಗಳು, ಸುತ್ತೋಲೆಗಳ ಕುರಿತು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ತಾಂತ್ರಿಕ ಸಹಾಯಕರು, ಬಿ.ಎಫ್.ಟಿ.ಗಳಿಗೆ ತಿಂಗಳಲ್ಲಿ ಒಂದು ಬಾರಿ ಒಂದು ದಿನದ ತರಬೇತಿ ಆಯೋಜಿಸುವುದು.

13. ಕಾಯಕ ಬಂಧುಗಳಿಗೆ ಅಗತ್ಯವಿರುವ ತರಬೇತಿಯನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಆಯೋಜಿಸುವುದು.

14. Rejected Transaction Regeneration, Work completion, PFMS Validation.

15. ಅನುಷ್ಠಾನ ಇಲಾಖೆಗಳು ಯೋಜನೆಯಡಿ ಅನುಷ್ಠಾನಗೊಳಿಸುವ ಕಾಮಗಾರಿಗಳು ಮತ್ತು ಕಡತಗಳನ್ನು ಪರಿಶೀಲಿಸುವುದು.

ಭಾಗವಹಿಸುವುದು.

16. ಕಾಯ್ದೆಯ ಅನುಸೂಚಿ–1ರಲ್ಲಿರುವಂತೆ ಅನುಷ್ಠಾನ ಇಲಾಖಾವಾರು ದೂರದೃಷ್ಟಿ ಯೋಜನೆ ತಯಾರಿಕೆ, ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗಳ ಮೇಲುಸ್ತುವಾರಿ ಮಾಡುವುದು.

17. ತಾಲ್ಲೂಕು ಪಂಚಾಯತಿ ಕಛೇರಿ ವ್ಯವಸ್ಥಾಪಕರು, ನೌಕರರು ಹಾಗೂ ಸಿಬ್ಬಂದಿಗಳ ಕಾರ್ಯನಿರ್ವಹಣೆಯ ಮೇಲುಸ್ತುವಾರಿ ಮತ್ತು ಸಮಗ್ರ ಆಡಳಿತಾತ್ಮಕ ಮೇಲ್ವಿಚಾರಣೆ/ಮಾಡುವುದು.

18. ಅನುಸೂಚಿತ ಜಾತಿ/ಪಂಗಡಗಳ ಜಿಲ್ಲಾ/ತಾಲ್ಲೂಕು ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ಹಾಗೂ ಪಾರಂಪರಿಕ ಅರಣ್ಯವಾಸಿಗಳಿಗೆ ಹಕ್ಕು ಕ್ಲೇಮು ಮಾಡುವ ಸಮಿತಿ ಸಭೆ, ಜೀತಗಾರಿಕೆ ಪದ್ಧತಿ ಸಭೆಗಳಲ್ಲಿ ಭಾಗವಹಿಸುವುದು ಮತ್ತು ಸಭಾ ನಿರ್ಣಯಗಳಿಗೆ ನಿಗದಿತ ಅವಧಿಯಲ್ಲಿ ಸೂಕ್ತ ಕ್ರಮವಹಿಸುವುದು.

19. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಅನುಕ್ರಮಣಿಕೆಗಳಡಿ ಹೊಂದಿರಬಹುದಾದ ತಾಲ್ಲೂಕು ಪಂಚಾಯತಿ ಗ್ರಾಮ ಪಂಚಾಯತಿ ಆಡಳಿತಾತ್ಮಕ ವಿಷಯಗಳ ಜವಾಬ್ದಾರಿಗಳ ಮೇಲ್ವಿಚಾರಣೆ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಹಕರಿಸುವುದು.

20. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯ–ವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ಅನುಕ್ರಮಣಿಕೆಗಳ ಆಡಳಿತಾತ್ಮಕ ವಿಷಯಗಳ ಮೇಲ್ವಿಚಾರಣೆ ಮತ್ತು ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಹಕರಿಸುವುದು.

21. 15 ನೇ ಹಣಕಾಸು. ಇತರೆ ಅನುದಾನದ ವಿಷಯಗಳ ನಿರ್ವಹಣೆ.

22. ಗ್ರಾಮ ಪಂಚಾಯತಿಯ ಮಲ ಹೊರುವ ಪದ್ಧತಿ ನಿಷೇಧ, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ, ಬಾಲ್ಯ ವಿವಾಹ ಪದ್ಧತಿ ನಿಷೇಧ, ಮಹಿಳಾ ಸಬಲೀಕರಣ ಇತ್ಯಾಧಿ ಕಾರ್ಯಕ್ರಮಗಳ ಬಗ್ಗೆ ಮೇಲ್ವಿಚಾರಣೆ ಮಾಡುವುದು.

23. ಮೇಲಿನ ಎಲ್ಲಾ ವಿಷಯಗಳ ಪಂಚಾಯತ್ ರಾಜ್ ಆಡಳಿತಾತ್ಮಕ ಕಾರ್ಯಸ್ವರೂಪಗಳ ಅಗತ್ಯ ಮಾಹಿತಿಯನ್ನು ಕಾರ್ಯನಿರ್ವಾಹಕ

| | |
|---|---|
| | ಅಧಿಕಾರಿಯವರಿಗೆ ಒದಗಿಸುವುದು ಮತ್ತು ನೆರವು ನೀಡುವುದು.<br>24. ಸರ್ಕಾರ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಕಾರ್ಯನಿರ್ವಾಹಕ ಅಧಿಕಾರಿಯವರು ಸೂಚಿಸುವ ಇನ್ನಿತರೆ ಎಲ್ಲಾ ಆಡಳಿತಾತ್ಮಕ ಕಾರ್ಯಸ್ವರೂಪಗಳ ಕರ್ತವ್ಯಗಳ ಮೇಲ್ವಿಚಾರಣೆ ಇದ್ದಲ್ಲಿ ಮಾಡುವುದು. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

17/08/2024

(ಶಕುಂತಲಾ ಚೌಗಲಾ)
ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ-2)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ :

1. ಮಹಾಲೇಖಪಾಲರು (ಎ&ಇ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು
3. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
5. ನಿರ್ದೇಶಕರು, ಪಂಚಾಯತ್ ರಾಜ್, ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು
6. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ) ಗ್ರಾ.ಅ.ಪಂ.ರಾಜ್ ಇಲಾಖೆ.
7. ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ – ಇವರಿಗೆ ತಮ್ಮ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಗಮನಕ್ಕೆ ತರತಕ್ಕದ್ದು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ,
9. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂಚಾಯತ್ ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ,
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ/ಕಂಪ್ಯೂಟರ್ ಸೆಲ್/ಇತರೆ

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 64 ಕೆ.ಎಸ್.ಎಸ್ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:08.01.2024

**ಸೇರ್ಪಡೆ**

ಕರ್ನಾಟಕ ಸರ್ಕಾರದ ನಡವಳಿ/ಆದೇಶ ಸಂಖ್ಯೆ:ಗ್ರಾಅಪ 05 ಕೆ.ಎಸ್.ಎಸ್ 2016(ಭಾಗ-1), ದಿನಾಂಕ:17.8.2021ರ ಆದೇಶ ಭಾಗದ ಅಂಕಣ -2 ರಲ್ಲಿ ಸಹಾಯಕ ನಿರ್ದೇಶಕರು (ಪಂಚಾಯತ್ ರಾಜ್) ಹುದ್ದೆಗೆ ಹಂಚಿಕೆ ಮಾಡಿರುವ ಪ್ರಕಾರ್ಯಗಳು ಕ್ರಮಾಂಕ-24 ರ ನಂತರ ಕ್ರಮಾಂಕ (25) ರಲ್ಲಿ ಕೆಳಕಂಡ ವಿಷಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇರ್ಪಡೆ ಮಾಡಿ ಆದೇಶಿಸಿದೆ.

**" 25. ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ವಸತಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕವಾಗಿ ತಾಲ್ಲೂಕು ಪಂಚಾಯತ್ ಕಛೇರಿ ಹಂತದ ಎಲ್ಲಾ ಪ್ರಕಾರ್ಯಗಳನ್ನು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರೊಂದಿಗೆ ಸಮನ್ವಯ ಸಾಧಿಸಿ, ನಿರ್ವಹಿಸುವುದು".**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಾಲಪ್ಪ) 08/01/2024
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:-**

1. ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.

3. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
5. ನಿರ್ದೇಶಕರು, ಪಂಚಾಯತ್ ರಾಜ್, ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ) ಗ್ರಾ.ಅ.ಪಂ.ರಾಜ್ ಇಲಾಖೆ.
7. ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ –ಇವರಿಗೆ ತಮ್ಮ ಕಛೇರಿಯ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ಮುಂದಿನ ಕ್ರಮಕ್ಕಾಗಿ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ/ಇತರೆ ಪ್ರತಿಗಳು

ಪ್ರತಿಗಳು

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ ಪಂ.ರಾಜ್ ಇಲಾಖೆ ಇವರು ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂಚಾಯತ್ ರಾಜ್).ಗ್ರಾ.ಅ.ಪಂ.ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.

## ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ:- ಜಿಲ್ಲಾ ಪಂಚಾಯಿತಿಗಳಲ್ಲಿ DRDA ಕೋಶದಲ್ಲಿ ಸಹಾಯಕ ಯೋಜನಾಧಿಕಾರಿ (ಗ್ರೂಪ್-ಬಿ) ಎಂದು ಮಂಜೂರಾಗಿ, ನಂತರ ORDP ಲೆಕ್ಕ ಶೀರ್ಷಿಕೆಗೆ ವರ್ಗಾವಣೆಗೊಂಡು ಸಹಾಯಕ ನಿರ್ದೇಶಕ(ಆಡಳಿತ) ಎಂದು ಪದನಾಮೀಕರಣಗೊಂಡಿರುವ ಹುದ್ದೆಗಳಿಗೆ ಕಾರ್ಯಹಂಚಿಕೆಯ ಬಗ್ಗೆ ಆದೇಶ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ:RDP/285/ವಿಸೇಬಿ/99 ದಿ:18.03.2000
2. ಆದೇಶ ಸಂಖ್ಯೆ:ಕೆಪಿಆರ್‌ಸಿ-ಜಿಪಿಪಿ/236/2021/ಡಿಡಿ-3 ದಿ:09.08.2021
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/150/ಕೆಪಿಎಸ್‌ಪಿಎಸ್/2021(೯) ದಿ:3.11.2022
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/150/ಕೆಪಿಎಸ್‌ಪಿಎಸ್/2021(೯) ದಿ:17.11.2022

### ಪ್ರಸ್ತಾವನೆ,

ಮೇಲೆ ಓದಲಾದ(1) ರ ದಿನಾಂಕ:18.03.2000 ರ ಆದೇಶದಲ್ಲಿ ಅಂದು ಅಸ್ತಿತ್ವದಲ್ಲಿದ್ದ, 27 ಜಿಲ್ಲಾ ಪಂಚಾಯಿತಿಗಳಿಗೆ ತಲಾ ಒಂದು ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರ ಕೋಶವನ್ನು ರಚಿಸಿ, ಆದೇಶ ಹೊರಡಿಸಲಾಗಿತ್ತು. ಸದರಿ ಆದೇಶದಲ್ಲಿ DWACRA ಯೋಜನೆಯಡಿ ಮಂಜೂರಾಗಿದ್ದ, ವೇತನ ಶ್ರೇಣಿ ರೂ.6000.00-11200.00 ಯ 27 ಹುದ್ದೆಗಳನ್ನು ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರ ಕೋಶಕ್ಕೆ ಸ್ಥಳಾಂತರ ಮಾಡಲಾಗಿತ್ತು. ನಂತರದ ಬೆಳವಣಿಗೆಯನುಸಾರ ಹೊಸದಾಗಿ ಸೃಜನೆಯಾದ ಜಿಲ್ಲಾ ಪಂಚಾಯಿತಿ ಕಛೇರಿಗಳಿಗೆ ತಲಾ ಒಂದು ಸಹಾಯಕ ಯೋಜನಾಧಿಕಾರಿ (ಗ್ರೂಪ್-ಬಿ) ಹುದ್ದೆಯನ್ನು ಸೃಜಿಸಿದ್ದು, ಅದರಂತೆ ಪ್ರತಿ ಜಿಲ್ಲಾ ಪಂಚಾಯಿತಿಗೆ ತಲಾ ಒಂದು ಗ್ರೂಪ್-ಬಿ ವೃಂದದ ಸಹಾಯಕ ಯೋಜನಾಧಿಕಾರಿ ಹುದ್ದೆ ಮಂಜೂರಾದಂತಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(2) ರ ದಿ:09.08.2021ರ ಆದೇಶದಲ್ಲಿ DRDA ಕೋಶದಡಿ ಕಾರ್ಯನಿರ್ವಹಿಸುತ್ತಿದ್ದ, ಸುಮಾರು 935 ವಿವಿಧ ವೃಂದದ ಹುದ್ದೆಗಳನ್ನು ORDP ಲೆಕ್ಕಶೀರ್ಷಿಕೆಗೆ ವರ್ಗಾಯಿಸಿದ್ದು, ಅದರಂತೆ ಗ್ರೂಪ್-ಬಿ ವೃಂದದ ಸಹಾಯಕ ಯೋಜನಾಧಿಕಾರಿಯ ಹುದ್ದೆಗಳು ORDP

ಲೆಕ್ಕಶೀರ್ಷಿಕೆಗೆ ವರ್ಗಾವಣೆಗೊಂಡಿರುತ್ತವೆ. ಈ ಹುದ್ದೆಗಳಿಗೆ ಹಿಂದಿನಿಂದಲೂ, ನಿಯೋಜನೆ ಮೇಲೆ ಅರ್ಹ ಅಧಿಕಾರಿಗಳ ಸೇವೆಯನ್ನು ಪಡೆದು, ಭರ್ತಿಮಾಡಲಾಗುತ್ತಿತ್ತು.

ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಲ್ಲಿ ವಿವಿಧ ಮೂಲಗಳಿಂದ ನೇಮಕಾತಿ ಹೊಂದಿ, ಕಾರ್ಯನಿರ್ವಹಿಸುತ್ತಿದ್ದ ಅಧೀಕ್ಷಕರುಗಳಿಗೆ ಮುಂಬಡ್ತಿ ಅವಕಾಶವನ್ನು ಕಲ್ಪಿಸಲು ಸರ್ಕಾರ ಉದ್ದೇಶಿಸಿ, ಮೇಲೆ ಓದಲಾದ, ಕ್ರಮಾಂಕ(3)ರ ದಿ:03.11.2022 ಆದೇಶದಲ್ಲಿ ಗ್ರೂಪ್-ಬಿ ವೃಂದದ ಸಹಾಯಕ ಯೋಜನಾಧಿಕಾರಿ ಹುದ್ದೆಯನ್ನು ಸಹಾಯಕ ನಿರ್ದೇಶಕ(ಆಡಳಿತ) ಎಂದು ಮರು ಪದನಾಮೀಕರಣ ಮಾಡುವುದರ ಜೊತೆಗೆ, ಮೇಲೆ ಓದಲಾದ ಕ್ರಮಾಂಕ(4)ರ ದಿ:17.11.2022 ರ ಆದೇಶದಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ದಿಸೆಯಲ್ಲಿ, ನೇಮಕಾತಿ ವಿಧಾನವನ್ನು ನಿಗದಿಪಡಿಸಿ ಆದೇಶಿಸಲಾಗಿತ್ತು.

ಅದರಂತೆ, ಅರ್ಹ ಅಧೀಕ್ಷಕರುಗಳಿಗೆ ಜೇಷ್ಠತೆ, ಅರ್ಹತೆ ಹಾಗೂ ಮೀಸಲಾತಿ ರೋಸ್ಟರ್‌ಗಳನ್ವಯ ವಿವಿಧ ಅಧಿಸೂಚನೆಗಳಲ್ಲಿ ಸಹಾಯಕ ನಿರ್ದೇಶಕ(ಆಡಳಿತ) ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ ಆದೇಶಿಸಲಾಗಿದೆ. ಪ್ರಸ್ತುತ ಸದರಿ ಹುದ್ದೆಗಳಿಗೆ ಸೂಕ್ತ ಕಾರ್ಯಹಂಚಿಕೆ ಮಾಡುವುದು ಅಗತ್ಯವೆಂದು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 102 ಕೆ.ಎಸ್.ಎಸ್ 2023(ಇ) ಬೆಂಗಳೂರು.**

**ದಿನಾಂಕ:22.08.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಜಿಲ್ಲಾ ಪಂಚಾಯಿತಿ ಕಛೇರಿಗಳಲ್ಲಿ DRDA ಕೋಶದಡಿ ಸಹಾಯಕ ಯೋಜನಾಧಿಕಾರಿ(ಗ್ರೂಪ್-ಬಿ) ಎಂಬ ಪದನಾಮದಲ್ಲಿ ಮಂಜೂರಾಗಿ, ನಂತರ ORDP ಲೆಕ್ಕ ಶೀರ್ಷಿಕೆಗೆ ವರ್ಗಾವಣೆಗೊಂಡು, ಸಹಾಯಕ ನಿರ್ದೇಶಕ(ಆಡಳಿತ) ಎಂದು ಮರು ಪದನಾಮೀಕರಣಗೊಂಡು, ಜಿಲ್ಲಾ ಪಂಚಾಯಿತಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಿಗೆ ಈ ಕೆಳಕಂಡಂತೆ ಕಾರ್ಯಹಂಚಿಕೆ/ಪ್ರಕಾರ್ಯಗಳನ್ನು ನಿಗದಿಪಡಿಸಿ, ಆದೇಶಿಸಿದೆ.

1. ಈ ಹಿಂದೆ ಸಹಾಯಕ ಯೋಜನಾಧಿಕಾರಿ(ಗ್ರೂಪ್-ಬಿ) ಹುದ್ದೆಗೆ ನಿಗದಿಪಡಿಸಿದ್ದ ಎಲ್ಲ ಪ್ರಕಾರ್ಯಗಳು.
2. ಆಸ್ತಿಗಳ ವಿಷಯ ನಿರ್ವಹಣೆ, ಮಾಹಿತಿ ಹಕ್ಕು, IPGRS, ಸಕಾಲ, ಜೇತಪದ್ಧತಿ, ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಮತ್ತು ಜಿ.ಪಂ., ತಾ.ಪಂ., ಗ್ರಾ.ಪಂ. ಕಛೇರಿ ಕಟ್ಟಡಗಳು ಮತ್ತು ನಿವೇಶನ ವಿಷಯಗಳ

ನಿರ್ವಹಣೆಯ ಉಸ್ತುವಾರಿ/ಮೇಲ್ವಿಚಾರಣೆಯನ್ನು ಒಳಗೊಂಡಂತೆ ಆಡಳಿತ ಶಾಖೆಯ ಎಲ್ಲಾ ವಿಷಯಗಳು.

3. ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಆಡಳಿತ ವಿಭಾಗದಲ್ಲಿ ಈ ಹಿಂದೆ ಅಧೀಕ್ಷಕರಿಂದ ಸಹಾಯಕ ಕಾರ್ಯದರ್ಶಿಯವರಿಗೆ ಮಂಡಿಸುತ್ತಿದ್ದ ಎಲ್ಲಾ ಪತ್ರ ಹಾಗೂ ಕಡತಗಳನ್ನು ಅಧೀಕ್ಷಕರಿಂದ ಸಹಾಯಕ ನಿರ್ದೇಶಕ(ಆಡಳಿತ) ಇವರಿಗೆ ಮಂಡಿಸಲ್ಪಡತಕ್ಕದ್ದು. ಸದರಿ ಪತ್ರ ಹಾಗೂ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ, ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಪತ್ರ ಹಾಗೂ ಕಡತವನ್ನು ಇವರ ಮೂಲಕ ಸಹಾಯಕ ಕಾರ್ಯದರ್ಶಿಯವರಿಗೆ ಮಂಡಿಸುವುದು.

4. ಗ್ರಾಮೀಣ ಪ್ರದೇಶದ ಮಹಿಳೆ ಹಾಗೂ ಮಕ್ಕಳ ಅಭಿವೃದ್ಧಿ ವಿಷಯವಾಗಿ ಸರ್ಕಾರವು ರೂಪಿಸಿರುವ/ರೂಪಿಸುವ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ದಿಸೆಯಲ್ಲಿ ಉಸ್ತುವಾರಿ/ಮೇಲ್ವಿಚಾರಣೆ.

5. ಸಂದರ್ಭಾನುಸಾರ ಮೇಲಾಧಿಕಾರಿಗಳು ಸೂಚಿಸುವ/ನಿಗದಿಪಡಿಸಬಹುದಾದ ಇತರೆ ಕರ್ತವ್ಯಗಳು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

(ಬಾಲಪ್ಪ) 22/02/2023

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳ-ಬಿ&ಸಿ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:-

1. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಕೆಂಪೇಗೌಡ ರಸ್ತೆ, ಬೆಂಗಳೂರು,
2. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ರಾಜಾಜಿನಗರ, ಬೆಂಗಳೂರು,
3. ಎಲ್ಲಾ ಜಿಲ್ಲಾ ಪಂಚಾಯಿತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ,
4. ಉಪ ಕಾರ್ಯದರ್ಶಿ, ಎಲ್ಲಾ ಜಿಲ್ಲಾ ಪಂಚಾಯಿತಿಗಳು,

5. ಸಹಾಯಕ ನಿರ್ದೇಶಕರುಗಳು(ಆಡಳಿತ), ಎಲ್ಲಾ ಜಿಲ್ಲಾ ಪಂಚಾಯಿತಿಗಳು(ಆಯಾಯ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
6. ಶಾಖಾ ರಕ್ಷಾ ಕಡತ:ಹೆಚ್ಚಿನ ಪ್ರತಿ.

<u>ಪ್ರತಿಗಳು</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ-2) , ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರು.

# ಅನುಬಂಧ-[illegible]

## ಸಹಾಯಕ ನಿರ್ದೇಶಕರ(ಗ್ರಾಮೀಣ ಉದ್ಯೋಗ) ಖಾಲಿ ಹುದ್ದೆಗಳ ವಿವರ

| ಕ್ರ. ಸಂ. | ಜಿಲ್ಲೆಯ ಹೆಸರು | | ತಾಲ್ಲೂಕು ಪಂಚಾಯಿತಿ ಹೆಸರು | ಹುದ್ದೆಯ ಸ್ಥಿತಿ | ಷರಾ |
|---|---|---|---|---|---|
| | | | **ಬೆಂಗಳೂರು** | | |
| 1 | ಬೆಂಗಳೂರು ನಗರ | 1. | ಬೆಂಗಳೂರು ಉತ್ತರ | | |
| | | 2. | ಯಲಹಂಕ | ಖಾಲಿ | |
| | | 3. | ಆನೇಕಲ್ | ಖಾಲಿ | |
| 2. | ಬೆಂಗಳೂರು ಗ್ರಾಮಾಂತರ | 4. | ನೆಲಮಂಗಲ | ಖಾಲಿ | |
| | | 5. | ದೊಡ್ಡಬಳ್ಳಾಪುರ | ಖಾಲಿ | |
| | | 6. | ಹೊಸಕೋಟೆ | ಖಾಲಿ | |
| | | 7. | ದೇವನಹಳ್ಳಿ | ಖಾಲಿ | |
| 2. | ರಾಮನಗರ | 8. | ಮಾಗಡಿ | ಖಾಲಿ | |
| 3 | ಕೋಲಾರ | 9. | ಕೋಲಾರ | ಖಾಲಿ | |
| | | 10. | ಮಾಲೂರು | ಖಾಲಿ | |
| | | 11. | ಶ್ರೀನಿವಾಸಪುರ | ಖಾಲಿ | |
| | | 12. | ಕೆಜಿಎಫ್ | ಖಾಲಿ | |
| | | 13. | ಬಂಗಾರ ಪೇಟೆ | ಖಾಲಿ | |
| 4 | ಚಿತ್ರದುರ್ಗ | 14. | ಚಿತ್ರದುರ್ಗ | ಖಾಲಿ | |
| 5 | ದಾವಣಗೆರೆ | 15. | ದಾವಣಗೆರೆ | ಖಾಲಿ | |
| | | 16. | ಹರಿಹರ | ಖಾಲಿ | |
| | | 17. | ನ್ಯಾಮತಿ | ಖಾಲಿ | |
| | | 18. | ಜಗಳೂರು | ಖಾಲಿ | |
| 6. | ತುಮಕೂರು | 19. | ತುಮಕೂರು | ಖಾಲಿ | |
| | | 20. | ಕುಣಿಗಲ್ | ಖಾಲಿ | |
| | | 21. | ಕೊರಟಗೆರೆ | ಖಾಲಿ | |
| | | 22. | ತುರುವೇಕೆರೆ | ಖಾಲಿ | |
| | | 23. | ಚಿಕ್ಕನಾಯಕನಹಳ್ಳಿ | ಖಾಲಿ | |
| | | 24. | ತಿಪಟೂರು | ಖಾಲಿ | |
| | | 25. | ಶಿರಾ | ಖಾಲಿ | |
| | | 26. | ಗುಬ್ಬಿ | ಖಾಲಿ | |
| 7. | ಶಿವಮೊಗ್ಗ | 27. | ಶಿವಮೊಗ್ಗ | ಖಾಲಿ | |
| | | 28. | ಸಾಗರ | ಖಾಲಿ | |
| | | 29. | ಹೊಸನಗರ | ಖಾಲಿ | |
| | | 30. | ತೀರ್ಥಹಳ್ಳಿ | ಖಾಲಿ | |
| | | 31. | ಸೊರಬ | ಖಾಲಿ | |
| 9. | ಚಿಕ್ಕಬಳ್ಳಾಪುರ | 32. | ಬಾಗೇಪಲ್ಲಿ | ಖಾಲಿ | |
| | | 33. | ಚಿಂತಾಮಣಿ | ಖಾಲಿ | |
| | | 34. | ಗುಡಿಬಂಡೆ | ಖಾಲಿ | |
| | | | 1. **ಮೈಸೂರು ವಿಭಾಗ** | | |

| | | | | | |
|---|---|---|---|---|---|
| 10. | ಮೈಸೂರು | 35. | ಮೈಸೂರು | ಖಾಲಿ ದಿ:10.8.2023 | |
| | | 36. | ಪಿರಿಯಾಪಟ್ಟಣ | ಖಾಲಿ | |
| | | 37. | ಹುಣಸೂರು | ಖಾಲಿ | |
| | | 38. | ಕೃಷ್ಣರಾಜನಗರ | ಖಾಲಿ | |
| | | 39. | ಸರಗೂರು | ಖಾಲಿ | |
| | | 40. | ಟಿ.ನರಸೀಪುರ | ಖಾಲಿ | |
| | | 41. | ಸಾಲಿಗ್ರಾಮ | ಖಾಲಿ | |
| 11. | ಚಾಮರಾಜನಗರ | 42. | ಚಾಮರಾಜನಗರ | ಖಾಲಿ | |
| | | 43. | ಗುಂಡ್ಲುಪೇಟೆ | ಖಾಲಿ | |
| | | 44. | ಕೊಳ್ಳೇಗಾಲ | ಖಾಲಿ | |
| 12 | ಕೊಡಗು | 45. | ಮಡಿಕೇರಿ | ಖಾಲಿ | |
| | | 46. | ವಿರಾಜಪೇಟೆ | ಖಾಲಿ | |
| | | 47. | ಸೋಮವಾರ ಪೇಟೆ | ಖಾಲಿ | |
| | | 48. | ಕುಶಾಲನಗರ | ಖಾಲಿ | |
| | | 49. | ಪೊನ್ನಂಪೇಟೆ | ಖಾಲಿ | |
| 13 | ಮಂಡ್ಯ | 50. | ಮಂಡ್ಯ | ಖಾಲಿ | |
| | | 51. | ಮದ್ದೂರು | ಖಾಲಿ | |
| | | 52. | ಮಳವಳ್ಳಿ | ಖಾಲಿ | |
| | | 53. | ಪಾಂಡವಪುರ | ಖಾಲಿ | |
| | | 54. | ಶ್ರೀರಂಗಪಟ್ಟಣ | ಖಾಲಿ | |
| | | 55. | ಕೆ.ಆರ್.ಪೇಟೆ | ಖಾಲಿ | |
| 14 | ಹಾಸನ | 56. | ಹಾಸನ | ಖಾಲಿ | |
| | | 57. | ಹೊಳೆನರಸೀಪುರ | ಖಾಲಿ | |
| | | 58. | ಚನ್ನರಾಯಪಟ್ಟಣ | ಖಾಲಿ | |
| | | 59. | ಅರಸೀಕೆರೆ | ಖಾಲಿ | |
| | | 60. | ಆಲೂರು | ಖಾಲಿ | |
| 15 | ಚಿಕ್ಕಮಗಳೂರು | 61. | ಚಿಕ್ಕಮಗಳೂರು | ಖಾಲಿ | |
| | | 62. | ತರೀಕೆರೆ | ಖಾಲಿ | |
| | | 63. | ಕೊಪ್ಪ | ಖಾಲಿ | |
| | | 64. | ಎನ್.ಆರ್.ಪುರ | ಖಾಲಿ | |
| | | 65. | ಅಜ್ಜಂಪುರ | ಖಾಲಿ | |
| | | 66. | ಕಳಸ | ಖಾಲಿ | |
| | | 67. | ಮೂಡಿಗೆರೆ | ಖಾಲಿ 03.7.2023 | |

| | | | | | |
|---|---|---|---|---|---|
| | | | | ರಿಂದ | |
| 16 | ದಕ್ಷಿಣ ಕನ್ನಡ | 68. | ಮಂಗಳೂರು | ಖಾಲಿ | |
| | | 69. | ಬೆಳ್ತಂಗಡಿ | ಖಾಲಿ | |
| | | 70. | ಪುತ್ತೂರು | ಖಾಲಿ | |
| | | 71. | ಸುಳ್ಯ | ಖಾಲಿ | |
| | | 72. | ಮೂಡಬಿದರೆ | ಖಾಲಿ | |
| | | 73. | ಕಡಬ | ಖಾಲಿ | |
| | | 74. | ಭಂಟ್ವಾಳ್ | ಖಾಲಿ | |
| | | 75. | ಮುಲ್ಕಿ | ಖಾಲಿ | |
| | | 76. | ಉಳ್ಳಾಲ | ಖಾಲಿ | |
| 17 | ಉಡುಪಿ | 77. | ಉಡುಪಿ | ಖಾಲಿ | |
| | | 78. | ಕಾರ್ಕಳ | ಖಾಲಿ | |
| | | 79. | ಬ್ರಹ್ಮಾವರ | ಖಾಲಿ | |
| | | 80. | ಬೈಂದೂರು | ಖಾಲಿ | |
| | | 81. | ಹೆಬ್ರಿ | ಖಾಲಿ | |
| | | 82. | ಕುಂದಾಪುರ | ಖಾಲಿ | |
| | | | **ಬೆಳಗಾವಿ ವಿಭಾಗ** | | |
| 18 | ಧಾರವಾಡ | 83. | ಅಣ್ಣಿಗೇರಿ | ಖಾಲಿ | |
| | | 84. | ನವಲಗುಂದ | ಖಾಲಿ | |
| | | 85. | ಕುಂದಗೋಳ | ಖಾಲಿ | |
| 19. | ಬೆಳಗಾವಿ | 86. | ಬೆಳಗಾವಿ | ಖಾಲಿ | |
| | | 87. | ಗೋಕಾಕ್ | ಖಾಲಿ ದಿ:10.08.2023 | |
| | | 88. | ಬೈಲಹೊಂಗಲ | ಖಾಲಿ | |
| | | 89. | ಸವದತ್ತಿ | ಖಾಲಿ | |
| | | 90. | ರಾಮದುರ್ಗ | ಖಾಲಿ | |
| | | 91. | ಚಿಕ್ಕೋಡಿ | ಖಾಲಿ | |
| | | 92. | ಅಥಣಿ | ಖಾಲಿ | |
| | | 93. | ಮೂಡಲಗಿ | ಖಾಲಿ | |
| | | 94. | ಕಾಗವಾಡ | ಖಾಲಿ | |
| | | 95. | ಕಿತ್ತೂರು | ಖಾಲಿ | |
| | | 96. | ಹುಕ್ಕೇರಿ | ಖಾಲಿ | |
| 20 | ವಿಜಯಪುರ | 97. | ತಿಕೋಟ | ಖಾಲಿ | |
| | | 98. | ದೇವರ ಹಿಪ್ಪರಗಿ | ಖಾಲಿ | |
| | | 99. | ತಾಳಿಕೋಟೆ | ಖಾಲಿ | |
| | | 100. | ಚಡಚಣ | ಖಾಲಿ | |
| | | 101. | ಕೊಲ್ಹಾರ | ಖಾಲಿ | |
| | | 102. | ಸಿಂಧಗಿ | ಖಾಲಿ | |
| | | 103. | ಅಲಮೇಲ | ಖಾಲಿ | |
| 21. | ಬಾಗಲಕೋಟೆ | 104. | ಬಾಗಲಕೋಟೆ | ಖಾಲಿ | |
| | | 105. | ಬಾದಾಮಿ | ಖಾಲಿ | |
| | | 106. | ಮುಧೋಳ | ಖಾಲಿ | |
| | | 107. | ಗುಳೇದಗುಡ್ಡ | ಖಾಲಿ | |
| | | 108. | ರಬಕವಿ-ಬನಹಟ್ಟಿ | ಖಾಲಿ | |
| | | 109. | ಇಲಕಲ್ | ಖಾಲಿ | |
| 22 | ಗದಗ | 110. | ಗದಗ | ಖಾಲಿ | |
| | | 111. | ಗಜೇಂದ್ರಗಡ | ಖಾಲಿ | |
| | | 112. | ಶಿರಹಟ್ಟಿ | ಖಾಲಿ | |